ಚಿನ್ನ, ಹಣ ಬೇರೆಯವರ ಕಣ್ಣಿಗೆ ಬಿದ್ದರೆ ಅನ್ನೋ ಭಯ. ಈ ಹಾಳಾದ ವಾಚು ಹಾಕಿಕೊಳ್ಳಲೇ ಬಾರದಿತ್ತು. ಪ್ರತಿ ದಿನ ಬಸ್ಸು ಹತ್ತಿ ನಿಶ್ಚಿಂತೆಯಿಂದ ನಿದ್ದೆ ಮಾಡುತಿದ್ದೆ. ಈಗ ನೆಮ್ಮದಿಯಿಲ್ಲ. ಇದರದ್ದೇ ಯೋಚನೆ, ಬೇಡದ ಆತಂಕ. ಎಲ್ಲರೂ ಕಳ್ಳರ ಹಾಗೆ ಕಾಣಿಸುತ್ತಾರೆ ಅನ್ನೋ ತಳಮಳ. ಈ ಮಹಾನುಭಾವರು ಬನ್ನಿ ಬನ್ನಿ ಅಂತ ಸೀಟಿನಲ್ಲಿ ಜಾಗ ಕೊಟ್ಟರು, ಸುಮ್ಮನೆ ಕೂರಲಿಲ್ಲ.

"ಯಾವ ಮಾಡೆಲು, ಎಷ್ಟಾಯ್ತು, ನಾನು ಇದೆ ತರಹದ್ದು ಒಂದು ತೊಗೋಬೇಕು ಅನ್ಕೊಂಡಿದಿದ್ದೀನಿ." ಹೀಗೆ ಸುಮ್ಮನೆ ಮಾತಾಡುತ್ತಿದ್ದರು. ಸ್ವಲ್ಪ ಹೊತ್ತು ನಾನು ಏನು ಮಾತಾಡದೆ ಇದ್ದದ್ದು ನೋಡಿ ಸುಮ್ಮನಾದರು.

ಇವರು ಇಳಿಯುವಾಗ, ಹಿಂದೆ ನಿಂತಿದ್ದೋರು ಸೀಟನ್ನ ಹಿಡಿಯೋಕೆ ಮೂರ್ನಾಕು ಜನ ಒಬ್ಬ ಮುಂದೆ ಕೈ ಹಿಡಿದು ಅಡ್ಡ ಇದ್ದಾನೆ, ಮತ್ತೊಬ್ಬ ಪಕ್ಕದಿಂದ ಕುಂಡೆ ನನ್ನ ಹೆಗಲಿಗೆ ಒತ್ತರಿಸಿ ನನ್ನನ್ನ ಕಿಟಕಿಯ ಕಡೆಗೆ ನೂಕಿದ. ಆ ಸರಬರದಲ್ಲಿ ನನ್ನ ಗಮನ ಕೆಟ್ಟಿತು. ಬಲಗೈನಿಂದ ಕಿಟಕಿಯ ಕಂಬಿ ಹಿಡಿದು ಎಡಗೈಯಿಂದ ಬ್ಯಾಗ್ ಎಳೆದುಕೊಂಡು ನೋಡುತ್ತೀನಿ, ವಾಚಿಲ್ಲ.

ಅಯ್ಯೋ, ನನ್ನ ವಾಚು ಹೋಯ್ತು, ಯಾರೋ ಕದ್ರು, ಕಳ್ಳ ಕಳ್ಳ ಎಂದು ಅವರ ಕಡೆ ನೋಡಿದೆ, ಜನ ಇವರೇ ಕಳ್ಳ ಅಂತ ಹಿಡಿದು ಒಂದೆರಡು ಚಚ್ಚಿದರು. ಇವರ ಅಂಗಿ ಷರಾಯಿ ಎಲ್ಲ ತಪಾಸಣೆ ಮಾಡಿದರು. ಬಸ್ಸಿನಿಂದ ಯಾರೂ ಇಳಿಯೋ ಹಾಗೆ ಇಲ್ಲ ಎಂದು ಹೇಳಿ ಕಂಡಕ್ಟರ್ ಡ್ರೈವರ್ ಬಾಗಿಲ ಬಳಿ ನಿಂತರು. ಆ ವ್ಯಕ್ತಿಯನ್ನ ನಾಲ್ಕಾರು ಜನ ಹಿಡಿದೇ ಇದ್ದರು. ಇಷ್ಟರಲ್ಲಿ ಯಾರೋ ಒಬ್ಬ ಡ್ರೈವರ್ ಸೀಟಿನಿಂದ ಕೆಳಗೆ ಹಾರಿ ಓಡಲು ಯತ್ನಿಸಿದ. ಜನ ಅವನನ್ನು ಹಿಡಿದರು. ವಾಚು ಅವನ ಹತ್ತಿರ ಇತ್ತು. ಜನ ಅವನನ್ನು ತದುಕಿದರು. ವಾಚಿಗೆ ಏನೋ ಆಗಿದೆ ಎಂಬ ಗಾಬರಿಯಲ್ಲಿದ್ದೆ. ಸಿಕ್ಕ ಬಳಿಕ ಅದನ್ನ ಚೀಲದಲ್ಲಿ ಹಾಕಿಕೊಂಡು ಬರುವಷ್ಟರಲ್ಲಿ ಈ ವ್ಯಕ್ತಿ ಇರಲಿಲ್ಲ. ಆವತ್ತಿನಿಂದ ಇವತ್ತಿನವರೆಗೂ ಕಂಡವರ ವಸ್ತುವಿಗೆ ಆಸೆ ಪಡಲಿಲ್ಲ. ನನ್ನ ಮುಠ್ಠಾಳತನಕ್ಕೆ ಯಾರೋ ಸಭ್ಯನಿಗೆ ಅನ್ಯಾಯವಾಯಿತು ಎನ್ನುವ ಕೊರಗು ಹೋಗಲೇ ಇಲ್ಲ. ಕಾಲ ಎಂತಹ ಆಟ ಕಟ್ಟಿದೆ ನೋಡಿ, ಇವತ್ತು ಅದೇ ವ್ಯಕ್ತಿ ಕೊಡುವ ಜೀತಕ್ಕೆ ದುಡಿಯುತ್ತಿದ್ದೀನಿ. ಸಾಹೇಬರು ತಿಂಡಿ ತಿಂದು ಬಂದ ಮೇಲೆ ಒಂದು ಸಾರಿ ಮನಃಸ್ಫೂರ್ತಿಯಾಗಿ ಕ್ಷಮೆ ಕೇಳಬೇಕು" ಎಂದು ಹೇಳುತ್ತಿದ್ದಂತೆ, ಅಲ್ಲಿಯವರೆಗೂ ಹಿಂದೆ ನಿಂತಿದ್ದ ಸಾಹೇಬರ ಕೈ ವೆಂಕಟ್ ಅವರ ಬೆನ್ನು ತಟ್ಟಿತು. ಎದ್ದು ಏನೋ ಹೇಳಲು ಹೋದವರನ್ನ ಸಾಹೇಬರು ಆಲಂಗಿಸಿದರು.

ಮೂವರ ಕಣ್ಣು ತೇವವಾಗಿತ್ತು, ವೆಂಕಟ್ ಅವರ ಕಣ್ಣ ಹನಿಯಲ್ಲಿ ಪ್ರಾಯಶ್ಚಿತ್ತವಿತ್ತು.

ಸುಬ್ಬು ಅವರ ಕಣ್ಣಲ್ಲಿ ಸಾಹೇಬರ ಕುರಿತು ತಪ್ಪು ತಿಳಿದು ಬಿಟ್ಟನೇ ಎಂಬ ಪಶ್ಚಾತ್ತಾಪವಿತ್ತು, ಸಾಹೇಬರೆಡೆಗೆ ಭಕ್ತಿ ಭಾವವಿತ್ತು.

ಸಾಹೇಬರ ಕಣ್ಣಲ್ಲಿ ಧನ್ಯತೆಯಿತ್ತು; ಕಾಲ ಒಂದು ಕ್ಷಣ ನಿಂತಂತಿತ್ತು. ಅವರ ವಾಚಿನ ಮುಳ್ಳುಗಳು ಇದ್ಯಾವುದಕ್ಕೂ ಸಂಬಂಧವಿಲ್ಲದಂತೆ ತಮ್ಮಷ್ಟಕ್ಕೆ ತಾವು ಮುಂದೆ ಹೋಗುತ್ತಿದ್ದವು.

**ಆದರ್ಶ್ ವಿಜಯಲಕ್ಷ್ಮಿ**

ಬೆಂಗಳೂರಿನಲ್ಲಿ ವಾಸ ಮತ್ತು ಬಹುರಾಷ್ಟ್ರೀಯ ಕಂಪನಿ ಐಬಿಎಂನಲ್ಲಿ ಉದ್ಯೋಗ. ಹವ್ಯಾಸಿ ಬರಹಗಾರ. 'ಹುಲಿಕಲ್ಲು ಮತ್ತು ಹುಲಿಯಮ್ಮ' ಎಂಬ ಕತೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದೆ.